# ‘ನವಿಲುಗರಿ’ಯ ಹಸನ್ಮುಖಿ

ಕಾಳಿಹುಂಡಿ ಶಿವಕುಮಾರ್

ಇತ್ತೀಚೆಗೆ ನಿಧನರಾದ ಬೆಂಗಳೂರು ಆಕಾಶವಾಣಿ ನಿಲಯ ನಿರ್ದೇಶಕ ಜಿ.ಕೆ.ರವೀಂದ್ರ ಕುಮಾರ್ ಬಹು ಎತ್ತರದ ವ್ಯಕ್ತಿ ಮತ್ತು ಅಷ್ಟೇ ಎತ್ತರದ ವ್ಯಕ್ತಿತ್ವ ಉಳ್ಳವರು. ಯುವ ಕವಿಗಳನ್ನು ಪ್ರೋತ್ಸಾಹಿಸುತ್ತಿದ್ದ ಅವರು ಸದಾ ಹಸನ್ಮುಖಿ. ಹಿರಿಯರು, ಕಿರಿಯರು ಎನ್ನದೆ ಆತ್ಮೀಯವಾಗಿ ಎಲ್ಲರನ್ನೂ ಮಾತನಾಡಿಸುತ್ತಿದ್ದರು.

> ಹಿರಿಯರು, ಕಿರಿಯರು ಎನ್ನದೆ ಎಲ್ಲರನ್ನೂ ಬಹಳ ಆತ್ಮೀಯವಾಗಿ ಮಾತನಾಡಿಸುತ್ತಿದ್ದ ಜಿ.ಕೆ. ರವೀಂದ್ರ ಕುಮಾರ್ ಅವರಿಗೆ, ಕನ್ನಡದ ಕಾರ್ಯಕ್ರಮಗಳು ಎಂದರೆ ಬಹಳ ಆಸಕ್ತಿ. ಮೈಸೂರು ಆಕಾಶವಾಣಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಮಾಡಿದ ‘ಸಿರಿಗನ್ನಡಂ ಗೆಲ್ಗೆ’ ಕಾರ್ಯಕ್ರಮ ಹೆಚ್ಚು ಜನಪ್ರಿಯವಾಗಿತ್ತು



ಜಿ.ಕೆ. ರವೀಂದ್ರ ಕುಮಾರ್

ನೆನಪು

ಕಂಚಿನ ಕಂಠದಿಂದ ಅವರು ಮನೆಮಾತಾಗಿದ್ದರು. ಆಕಾಶವಾಣಿಯ ಕಾರ್ಯಕ್ರಮಗಳ ಬಗ್ಗೆ ಅಥವಾ ಪತ್ರಿಕೆಗಳಲ್ಲಿ ಕವನ, ಲೇಖನ ವಿಮರ್ಶೆ ಬಂದಾಗ ನಾನು ಹಲವು ಬಾರಿ ಅವರ ಸಾಹಿತ್ಯದ ಬಗ್ಗೆ ಚರ್ಚಿಸಿದ್ದೂ ಉಂಟು. ತಾವು ಅಂದುಕೊಂಡ ಕೆಲಸಗಳನ್ನು ಸದ್ದಿಲ್ಲದೆ ಮಾಡಿ ಮುಗಿಸುವ ಪ್ರವೃತ್ತಿಯುಳ್ಳವರು.

ಮೈಸೂರು ಆಕಾಶವಾಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಹಲವು ಬಾರಿ ಅವರನ್ನು ಭೇಟಿಯಾಗಿದ್ದೇನೆ. ಬಾನುಲಿ ಸ್ಪರ್ಧೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿ ಬಂದಾಗ ಫೋನ್ ಮಾಡಿ ಅಭಿನಂದನೆ ಸಲ್ಲಿಸಿದ್ದೇನೆ. ಆಗ ಅವರು ಹೇಳಿದ ಮಾತುಗಳು ಇಂದಿಗೂ ಮರೆಯಲು ಸಾಧ್ಯವಾಗಿಲ್ಲ.

‘ಪ್ರಶಸ್ತಿ, ಬಹುಮಾನಗಳು ಬರಲಿ-ಬಿಡಲಿ ನಮ್ಮ ನಿರಂತರ ಪ್ರಯತ್ನ ಇರಲೇಬೇಕು. ಸೋಲು –ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸಬೇಕು. ಯಾವುದೇ ಸಾಹಿತ್ಯ ಸೃಷ್ಟಿಯಾಗಬೇಕಾದರೆ ಸತತ ಅಧ್ಯಯನ ಅಗತ್ಯ. ಎಷ್ಟು ಓದುತ್ತೇವೆ ಎನ್ನುವುದಕ್ಕಿಂತ ಎಷ್ಟು ಅರ್ಥವಾಗಿದೆ ಎನ್ನುವುದು ಮುಖ್ಯ’ ಎನ್ನುತ್ತಿದ್ದರು.

ಅವರ ಮನೆಗೆ ಒಮ್ಮೆ ಭೇಟಿ ಕೊಟ್ಟಾಗ ಪುಟ್ಟ ಗ್ರಂಥಾಲಯವನ್ನು ಸೂಕ್ಷ್ಮವಾಗಿ ಗಮನಿಸಿದೆ. ಕಥೆ-ಕಾದಂಬರಿ, ಲೇಖನ, ಅಧ್ಯಾತ್ಮ... ಹೀಗೆ ವಿವಿಧ ವಿಭಾಗಗಳನ್ನು ಮಾಡಿದ್ದರು. ‘ಪುಸ್ತಕ, ಪತ್ರಿಕೆಗಳನ್ನು ಓದಿದ ನಂತರ ಮಾರಬೇಕು, ಮೌಲ್ಯಯುತವಾದವುಗಳನ್ನು ಇಟ್ಟುಕೊಳ್ಳಬೇಕು’ ಎಂದು ಹೇಳುತ್ತಿದ್ದರು.

ಆಕಾಶವಾಣಿಯಲ್ಲಿನ ಕಾರ್ಯಕ್ರಮ ಸಿದ್ಧತೆ, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವ ಹಂತದಲ್ಲಿ ಅವರು ಯಾವ ರೀತಿಯಲ್ಲಿ ತಯಾರಾಗುತ್ತಿದ್ದರು ಎಂಬುದರ ಬಗ್ಗೆ ಮಾಹಿತಿ ನೀಡುತ್ತಿದ್ದರು.

ಹಿರಿಯರು, ಕಿರಿಯರು ಎನ್ನದೆ ಎಲ್ಲರನ್ನೂ ಬಹಳ ಆತ್ಮೀಯವಾಗಿ ಮಾತನಾಡಿಸುತ್ತಿದ್ದ ರವೀಂದ್ರ ಕುಮಾರ್ ಅವರಿಗೆ, ಕನ್ನಡದ ಕಾರ್ಯಕ್ರಮಗಳು ಎಂದರೆ ಬಹಳ ಆಸಕ್ತಿ. ಮೈಸೂರು ಆಕಾಶವಾಣಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಮಾಡಿದ ‘ಸಿರಿಗನ್ನಡಂ ಗೆಲ್ಗೆ’ ಎಂಬ ಶೀರ್ಷಿಕೆಯ ಮೂಲಕ ಒಂದು ವರ್ಷ ಪೂರ್ತಿ ಕರ್ನಾಟಕದ ಇತಿಹಾಸ ಪ್ರಸಿದ್ಧ ಕೋಟೆಕೊತ್ತಲಗಳು, ಸ್ಥಳಗಳು, ಸ್ಮಾರಕಗಳು, ಕವಿಗಳು ಲೇಖಕರು, ಪ್ರವಾಸಿ ಸ್ಥಳಗಳ ಮಾಹಿತಿಯ ಕಾರ್ಯಕ್ರಮ ಎಲ್ಲರನ್ನು ಸೂಜಿಗಲ್ಲಿನಂತೆ ಸೆಳೆಯಿತು. ‘ನವಿಲುಗರಿ’ ಎಂಬ ಬೆಳಗಿನ ಬಾನುಲಿ ಬೆಡಗಿಗೆ ತಮ್ಮದೇ ಆದ ಶೈಲಿಯಲ್ಲಿ ಹೊಸ ಹೊಸ ವಿಷಯಗಳೊಂದಿಗೆ ಪ್ರಸ್ತುತಪಡಿಸುತ್ತಿದ್ದರು.

‘ನಾವು ಯಾವುದೇ ಕೆಲಸ ಮಾಡುವಾಗ ತಲುಪುವ ದಾರಿ ಸ್ಪಷ್ಟವಾಗಿ ಮತ್ತು ನೇರವಾಗಿ, ಯೋಜಿತವಾಗಿ ಇರಬೇಕು’ ಎಂದು ಕಿರಿಯರಿಗೆ ಸಲಹೆ ನೀಡುತ್ತಿದ್ದರು.

ಇಂಥ ಸರಳ ಸಜ್ಜನಿಕೆಯ ರವೀಂದ್ರ ಕುಮಾರ್ ಅವರು ನನಗೆ ಸಿಕ್ಕ ಕಡಿಮೆ ಅವಧಿಯಲ್ಲಿಯೇ ಅನೇಕ ಮೌಲ್ಯಯುತ ಸಲಹೆ ಸೂಚನೆಗಳನ್ನು ನೀಡಿದ್ದಾರೆ.



ಕುಂದು ಕೊರತೆ

## ಚರಂಡಿ ಗುಂಡಿ ಮುಚ್ಚಿಸಿ

ನಗರದ ಮಾಲ್ ಆಫ್ ಮೈಸೂರ್ ಬಳಿ ಒಳಚರಂಡಿಗೆ ಹಾಕಿರುವ ಸಿಮೆಂಟ್ ಸ್ಲ್ಯಾಬ್ ಮುರಿದಿದ್ದು, ಪಾದಚಾರಿಗಳಿಗೆ ತೊಂದರೆಯಾಗಿದೆ.

ವಿದ್ಯುದ್ದೀಪದ ವ್ಯವಸ್ಥೆ ಇಲ್ಲದಿರುವುದರಿಂದ ರಾತ್ರಿ ವೇಳೆ ಯಾರಾದರೂ ಬಿದ್ದು ಗಾಯ ಮಾಡಿಕೊಳ್ಳುವ ಅಪಾಯವಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಕ್ರಮ ಕೈಗೊಳ್ಳಬೇಕು.

**ಬಿ.ಕೆ.ವರ್ಷಿಣಿ, ವಿದ್ಯಾರ್ಥಿನಿ**

## ಅರಳಿಮರದಕಟ್ಟೆಯಲ್ಲಿ ತಂಗುದಾಣ ನಿರ್ಮಿಸಿ

ಬೋಗಾದಿ ಡಬಲ್ ರಸ್ತೆಯ ಅರಳಿಮರದ ಕಟ್ಟೆಯಲ್ಲಿ ಬಸ್ ಸ್ಟ್ಯಾಂಡ್ ಇಲ್ಲದೆ ಜನ ಬಿಸಿಲು, ಮಳೆಯಲ್ಲಿ ನಿಲ್ಲುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕು.

ಕೆ.ಎಸ್.ಪ್ರದೀಪ್, ಬೋಗಾದಿ

## ದಸರಾ: ಮಹಿಳೆ, ವೃದ್ಧರಿಗೆ ರಕ್ಷಣೆ ನೀಡಿ

ವೈಭವದ ದಸರಾ ಯಾವುದೇ ಅವಘಡಗಳಿಲ್ಲದೇ ಮುಗಿದಿದೆ. ಆದರೆ ಮೆರವಣಿಗೆ ಸಾಗುವ ಹಾದಿಯಲ್ಲಿ ಮಕ್ಕಳು, ಮಹಿಳೆಯರು ಹಾಗೂ ಹಿರಿಯರ ಬಗ್ಗೆ ಕಾಳಜಿ ವಹಿಸಲೇಬೇಕು.

ಚಿನ್ನದ ಅಂಬಾರಿ ನೋಡಲು ಜನ ನೂಕುನುಗ್ಗಲು ಹೆಚ್ಚಿರುತ್ತದೆ. ಈ ವೇಳೆ ತೊಂದರೆಯಾಗುವ ಸಾಧ್ಯತೆಯೇ ಹೆಚ್ಚು. ಈ ಬಾರಿ ಪೊಲೀಸರು ವ್ಯವಸ್ಥಿತವಾಗಿ ಭದ್ರತೆ ಕಲ್ಪಿಸಿದ್ದರು.

ಆದರೆ ವರ್ಷದಿಂದ ವರ್ಷಕ್ಕೆ ಜನಸಂದಣಿ ಹೆಚ್ಚುತ್ತಲೇ ಇರುತ್ತದೆ. ಹೀಗಾಗಿ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ವ್ಯವಸ್ಥೆ ಅಗತ್ಯವಿದೆ. ಮೆರವಣಿಗೆ ಸಾಗುವ ಪ್ರತೀ ಹಂತಕ್ಕೂ ಪಾಸ್ ನೀಡಬೇಕಾದ ಅಗತ್ಯ ಬರಬಹುದು.

ಮೆರವಣಿಗೆ ಹೊದಲ್ಲೆಲ್ಲಾ ಬೇಕಂತಲೇ ನುಗ್ಗುವ ಕಿಡಿಗೇಡಿಗಳೂ ಇದ್ದಾರೆ. ಇವರನ್ನು ಗುರುತಿಸುವ ಅಗತ್ಯವಿದೆ. ಮೆರವಣಿಗೆ ವೇಳೆಯೂ ಸೂಕ್ತ ಭದ್ರತೆ, ಜನರನ್ನು ನಿಯಂತ್ರಿಸುವ ಅಗತ್ಯವಿದೆ. ಆಗ ಪ್ರವಾಸೋದ್ಯಮಕ್ಕೂ ಹೆಚ್ಚಿನ ಅನುಕೂಲವಾಗುತ್ತದೆ.

**-ಅನಿಲ್ ಕುಮಾರ್ ನಾಡಿಗೇರ್,** ರಾಮಕೃಷ್ಣನಗರ

## ರೈಲುಗಳ ಮಾಹಿತಿ

***ಪ್ಯಾಸೆಂಜರ್, **ಎಕ್ಸ್‌ಪ್ರೆಸ್, ***ಸೂಪರ್ ಫಾಸ್ಟ್,******

ಭದ್ರತಾ ಸಹಾಯ ವಾಣಿ 182, ಸೇವಾ ಸಹಾಯವಾಣಿ 183, ವಿಚಾರಣೆ 139

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಬೆಂಗಳೂರಿಗೆ | ಬೆಂಗಳೂರಿನಿಂದ | ಮೈಸೂರಿಗೆ |
|---|---|---|---|---|---|
| 22818/22817 | ಮೈಸೂರು-ಹೌರಾ***(ಸಾಪ್ತಾಹಿಕ) | ರಾತ್ರಿ12.30(ಸೋಮ) | ರಾತ್ರಿ 2.50 | ರಾತ್ರಿ 1 (ಭಾನು) | ರಾತ್ರಿ 3.45 |
| 12610/12609 | ಚೆನ್ನೈ ಎಕ್ಸ್‌ಪ್ರೆಸ್ | ಬೆಳಿಗ್ಗೆ 4.45 | ಬೆಳಿಗ್ಗೆ 7.45 | ರಾತ್ರಿ 8.10 | ರಾತ್ರಿ 11.30 |
| 16217/16218 | ಮೈಸೂರು-ಶಿರಡಿ**(ಸಾಪ್ತಾಹಿಕ) | ಬೆಳಿಗ್ಗೆ 5.30(ಸೋಮ) | ಬೆಳಿಗ್ಗೆ 8.27 | ರಾತ್ರಿ 3.30 | ಬೆಳಿಗ್ಗೆ 6 (ಗುರು) |
| 16518/16517 | ಕಣ್ಣೂರು ಎಕ್ಸ್‌ಪ್ರೆಸ್ | ಬೆಳಿಗ್ಗೆ 5.30 | ಬೆಳಿಗ್ಗೆ 8.20 | ರಾತ್ರಿ 8.30(ಸೋ, ಮಂ, ಭಾನು) | ರಾತ್ರಿ 11.05 |
| 66554/66553 | ಮೈಸೂರು-ಬೆಂಗಳೂರು* (ಮೆಮು) | ಬೆಳಿಗ್ಗೆ 6.10 | ಬೆಳಿಗ್ಗೆ 9:15 | ಸಂಜೆ 7.30 | ರಾತ್ರಿ 10.20 |
| 17326/17325 | ಮೈಸೂರು-ಹುಬ್ಬಳ್ಳಿ (ವಿಶ್ವಮಾನವ) | ಬೆಳಿಗ್ಗೆ 5.50 | ಬೆಳಿಗ್ಗೆ 8.55 | ಸಂಜೆ 5.45 | ರಾತ್ರಿ 8.40 |
| 16215/16216 | ಚಾಮುಂಡಿ ಎಕ್ಸ್‌ಪ್ರೆಸ್** | ಬೆಳಿಗ್ಗೆ 6.45 | ಬೆಳಿಗ್ಗೆ 9.30 | ಸಂಜೆ 6.15 | ರಾತ್ರಿ 9.05 |
| 12578/12577 | ಮೈಸೂರು-ಭಾಗಮತಿ*(ಸಾಪ್ತಾಹಿಕ) | ಬೆಳಿಗ್ಗೆ 7.20 (ಶನಿ) | ಬೆಳಿಗ್ಗೆ 9.55 | ರಾತ್ರಿ 8.55 (ಗುರು) | ರಾತ್ರಿ 11.30 |
| 16229/16230 | ಮೈಸೂರು-ವಾರಾಣಸಿ** | ಬೆಳಿಗ್ಗೆ 7.20 | ಬೆಳಿಗ್ಗೆ 9.55 | ನಸುಕು 12.15 (ಭಾನು,ಮಂಗಳ) | ನಸುಕು 2.55 |
| 16023/16024 | ಮಾಲ್ಗುಡಿ ಎಕ್ಸ್‌ಪ್ರೆಸ್ | ಬೆಳಿಗ್ಗೆ 8.25 | ಬೆಳಿಗ್ಗೆ 10.55 | ಮಧ್ಯಾಹ್ನ 1.30 | ಸಂಜೆ 4 |
| 56281/56282 | ಬೆಂಗಳೂರು- ಚಾಮರಾಜನಗರ * | ಬೆಳಿಗ್ಗೆ 9.05 | ಮಧ್ಯಾಹ್ನ 12.15 | ಮಧ್ಯಾಹ್ನ 3.30 | ಸಂಜೆ 6.40 |
| 12975/12976 | ಮೈಸೂರು-ಜೈಪುರ***(ಗುರು,ಶನಿ) | ಬೆಳಿಗ್ಗೆ 10.30 | ಮಧ್ಯಾಹ್ನ 12.55 | ಮಧ್ಯಾಹ್ನ 1 (ಬುಧ, ಶುಕ್ರ) | ಸಂಜೆ 3.45 |
| 12613/12614 | ಟಿಪ್ಪು ಎಕ್ಸ್‌ಪ್ರೆಸ್*** | ಬೆಳಿಗ್ಗೆ 11.30 | ಮಧ್ಯಾಹ್ನ 2.00 | ಮಧ್ಯಾಹ್ನ 3.15 | ಸಂಜೆ 5.45 |
| 17307/17308 | ಮೈಸೂರು-ಬಾಗಲಕೋಟೆ (ಬಸವ)** | ಮಧ್ಯಾಹ್ನ 1.30 | ಸಂಜೆ 4.30 | ಬೆಳಿಗ್ಗೆ 11.15 | ಮಧ್ಯಾಹ್ನ 1.50 |
| 12008/12007 | ಶತಾಬ್ದಿ ಎಕ್ಸ್‌ಪ್ರೆಸ್*** (ಬುಧವಾರ ಹೊರತುಪಡಿಸಿ) | ಮಧ್ಯಾಹ್ನ 2.15 | ಸಂಜೆ 4.15 | ಬೆಳಿಗ್ಗೆ 11 | ಮಧ್ಯಾಹ್ನ 1 |
| 16557/16558 | ರಾಜ್ಯರಾಣಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 2.30 | ಸಂಜೆ 5.10 | ಬೆಳಿಗ್ಗೆ 10.30 | ಮಧ್ಯಾಹ್ನ 1.30 |
| 16315/16316 | ಕೊಚ್ಚುವೇಲಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 12.50 | ಸಂಜೆ 4.35 | ಬೆಳಿಗ್ಗೆ 8.25 | ಬೆಳಿಗ್ಗೆ 11.20 |
| 12786/12785 | ಕಾಚಿಗುಡ ಮೈಸೂರು ಎಕ್ಸ್‌ಪ್ರೆಸ್ | ಮಧ್ಯಾಹ್ನ 2.45 | ಸಂಜೆ 5.40 | ಬೆಳಿಗ್ಗೆ 6.45 | ಬೆಳಿಗ್ಗೆ 9.45 |
| 66552/66551 | ಮೈಸೂರು-ಬೆಂಗಳೂರು (ಮೆಮು) | ಮಧ್ಯಾಹ್ನ 1.45 | ಸಂಜೆ 5 | ಬೆಳಿಗ್ಗೆ 9.20 | ಮಧ್ಯಾಹ್ನ 12.45 |
| 16232/16231 | ಮೈಸೂರು-ಮೈಲಾಡುತುರೈ** | ಸಂಜೆ 4.15 | ಸಂಜೆ 6.45 | ಬೆಳಿಗ್ಗೆ 5.50 | ಬೆಳಿಗ್ಗೆ 8.30 |
| 16535/16536 | ಮೈ -ಸೊಲ್ಲಾಪುರ(ಗೋಲ್‌ಗುಂಬಜ್) | ಮಧ್ಯಾಹ್ನ 3.30 | ಸಂಜೆ 6.50 | ಬೆಳಿಗ್ಗೆ 8.05 | ಬೆಳಿಗ್ಗೆ 11 |
| 16219/16220 | ಚಾಮರಾಜನಗರ-ತಿರುಪತಿ* | ಸಂಜೆ 5 | ರಾತ್ರಿ 8.15 | ಬೆಳಿಗ್ಗೆ 7.30 | ಬೆಳಿಗ್ಗೆ 10.40 |
| 16236/16235 | ಮೈಸೂರು-ಟುಟಿಕೋರಿನ್** | ಸಂಜೆ 6.05 | ರಾತ್ರಿ 9.05 | ಬೆಳಿಗ್ಗೆ 7 | ಬೆಳಿಗ್ಗೆ 9.55 |
| 16210/16209 | ಮೈಸೂರು- ಅಜ್ಮೀರ್ ** | ಸಂಜೆ 6.30 (ಮಂಗಳ, ಗುರು) | ರಾತ್ರಿ 9.30 | ರಾತ್ರಿ 3.30 (ಶುಕ್ರ, ಭಾನು) | ಬೆಳಿಗ್ಗೆ 6 |
| 16592/16591 | ಮೈಸೂರು-ಹುಬ್ಬಳ್ಳಿ (ಹಂಪಿ)** | ಸಂಜೆ 7.00 | ರಾತ್ರಿ 9.55 | ಬೆಳಿಗ್ಗೆ 6.20 | ಬೆಳಿಗ್ಗೆ 9.10 |
| 56234/56233 | ಮೈಸೂರು-ಬೆಂಗಳೂರು*(ಸಾಪ್ತಾಹಿಕ) | ಸಂಜೆ 7.10 | ರಾತ್ರಿ 10.25 | ಬೆಳಿಗ್ಗೆ 5 | ಬೆಳಿಗ್ಗೆ 8.00 |
| 22681/22682 | ಮೈಸೂರು-ಚೆನ್ನೈ*** | ರಾತ್ರಿ 8.10 (ಬುಧ) | ರಾತ್ರಿ 10.45 | ಬೆಳಿಗ್ಗೆ 5.25 (ಶುಕ್ರ) | ಬೆಳಿಗ್ಗೆ 8.00 |
| 16022/16021 | ಮೈಸೂರು-ಚೆನ್ನೈ (ಕಾವೇರಿ)** | ರಾತ್ರಿ 8.30 | ರಾತ್ರಿ 11.25 | ಬೆಳಿಗ್ಗೆ 3.50 | ಬೆಳಿಗ್ಗೆ 6.40 |
| 56263/56264 | ಮೈಸೂರು-ಬೆಂಗಳೂರು* | ರಾತ್ರಿ 11.55 | ಬೆಳಿಗ್ಗೆ 4:15 | ರಾತ್ರಿ 11.55 | ನಸುಕಿನ 4 |
| 06576/06575 | ಮೆಮು | ರಾತ್ರಿ 8.30 | ರಾತ್ರಿ 11.20 | ಸಂಜೆ 5.20 | ರಾತ್ರಿ 8.20 |

## ಮೈಸೂರು-ಅರಸೀಕೆರೆ ರೈಲುಗಾಡಿಗಳ ವೇಳಾಪಟ್ಟಿ

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಅರಸೀಕೆರೆಗೆ | ಅರಸೀಕೆರೆಯಿಂದ | ಮೈಸೂರಿಗೆ |
|---|---|---|---|---|---|
| 16206/16205 | ಮೈಸೂರು-ತಾಳಗುಪ್ಪ** | ಬೆಳಿಗ್ಗೆ 6.00 | ಬೆಳಿಗ್ಗೆ 8.48 | ಸಂಜೆ 6.50 | ರಾತ್ರಿ 10.15 |
| 11036/11035 | ಮೈಸೂರು-ದಾದರ್ (ಶರಾವತಿ)** | ಬೆಳಿಗ್ಗೆ 6.15 (ಭಾನು) | ಬೆಳಿಗ್ಗೆ.9.10 | ಸಂಜೆ 6.05 (ಶುಕ್ರ) | ರಾತ್ರಿ 9.40 |
| 17326/17325 | ಮೈಸೂರು- ಹುಬ್ಬಳ್ಳಿ (ಬೆಂಗಳೂರು ಮಾರ್ಗ) | ಬೆಳಿಗ್ಗೆ 6.10 | ಮಧ್ಯಾಹ್ನ 12.20 | ಮಧ್ಯಾಹ್ನ 1.15 | ರಾತ್ರಿ 8.40 |
| 56266/56265 | ಮೈಸೂರು-ಅರಸೀಕೆರೆ* | ಬೆಳಿಗ್ಗೆ 6.30 | ಬೆಳಿಗ್ಗೆ 10.40 | ಸಂಜೆ 5.30 | ರಾತ್ರಿ 9.25 |
| 16229/16230 | ಮೈಸೂರು-ಬಿಎಸ್‌ಬಿ | ಬೆಳಿಗ್ಗೆ 7.20 (ಮಂಗಳ/ಗುರು) | ಮಧ್ಯಾಹ್ನ 1.10 | ರಾತ್ರಿ 8.50 (ಸೋಮ/ಶನಿ) | ರಾತ್ರಿ 2.50 |
| 56270/56269 | ಮೈಸೂರು-ಶಿವಮೊಗ್ಗ* | ಬೆಳಿಗ್ಗೆ 10.20 | ಮಧ್ಯಾಹ್ನ 1.45 | ಮಧ್ಯಾಹ್ನ 12.30 | ಸಂಜೆ 4.30 |
| 56276/56275 | ಮೈಸೂರು-ತಾಳಗುಪ್ಪ* | ಮಧ್ಯಾಹ್ನ 2.00 | ಸಂಜೆ 6.00 | ಬೆಳಿಗ್ಗೆ 10.25 | ಮಧ್ಯಾಹ್ನ2.50 |
| 16535/16536 | ಮೈಸೂರು-ಗೋಲಗುಂಬಜ್ (ಬೆಂಗಳೂರು ಮಾರ್ಗ) | ಮಧ್ಯಾಹ್ನ 3.30 | ರಾತ್ರಿ 9.45 | ಬೆಳಿಗ್ಗೆ 4.13 | ಬೆಳಿಗ್ಗೆ 11.00 |
| 56268/56267 | ಮೈಸೂರು-ಅರಸೀಕೆರೆ* | ಸಂಜೆ 6.20 | ರಾತ್ರಿ 10.40 | ಬೆಳಿಗ್ಗೆ 5 | ಬೆಳಿಗ್ಗೆ 9.30 |
| 16210/16209 | ಮೈಸೂರು-ಅಜ್ಮೀರ್ ಎಕ್ಸ್‌ಪ್ರೆಸ್ | ಸಂಜೆ 6.30 (ಮಂಗಳ/ಗುರು) | ರಾತ್ರಿ 12.45 | ರಾತ್ರಿ 10.55 (ಸೋಮ/ಶನಿ) | ಬೆಳಿಗ್ಗೆ 6.00 |
| 12781/12782 | ಸ್ವರ್ಣಜಯಂತಿ** | ರಾತ್ರಿ 8.10 (ಶುಕ್ರ) | ರಾತ್ರಿ 11.05 | ರಾತ್ರಿ 1.40 (ಬುಧ) | ನಸುಕಿನ 4.55 |
| 17301/17302 | ಮೈಸೂರು-ಶಿವಮೊಗ್ಗ (ಧಾರವಾಡ) | ರಾತ್ರಿ 10.30 | ರಾತ್ರಿ 1.35 | ರಾತ್ರಿ 3.05 | ಬೆಳಿಗ್ಗೆ 7 |
| 56216/56215 | ಮೈಸೂರು-ಶ್ರವಣಬೆಳಗೊಳ* | ಬೆಳಿಗ್ಗೆ 7.45 | ಬೆಳಿಗ್ಗೆ 11.43 (ಶ್ರ.ಗೊಳ) | ಮಧ್ಯಾಹ್ನ 2.20 (ಶ್ರ.ಗೊಳ) | ರಾತ್ರಿ 8.05 |

## ಮೈಸೂರು-ಚಾಮರಾಜನಗರ ಮಾರ್ಗ

| ಗಾಡಿ ಸಂಖ್ಯೆ | ಮೈಸೂರಿನಿಂದ | ನಂಜನಗೂಡಿಗೆ | ಚಾ.ರಾಜನಗರಕ್ಕೆ | ಚಾ.ರಾಜನಗರದಿಂದ | ನಂಜನಗೂಡಿಗೆ | ಮೈಸೂರಿಗೆ |
|---|---|---|---|---|---|---|
| 56202/56281 | ಬೆಳಿಗ್ಗೆ 5 | ಬೆಳಿಗ್ಗೆ 5.39 | ಬೆಳಿಗ್ಗೆ 6.40 | ಬೆಳಿಗ್ಗೆ 7.00 | ಬೆಳಿಗ್ಗೆ 7.55 | ಬೆಳಿಗ್ಗೆ 9.00 |
| 56204/56203 | ಬೆಳಿಗ್ಗೆ 7.20 | ಬೆಳಿಗ್ಗೆ 8 | ಬೆಳಿಗ್ಗೆ 9.10 | ಬೆಳಿಗ್ಗೆ 10.40 | ಬೆಳಿಗ್ಗೆ 11.30 | ಮಧ್ಯಾಹ್ನ 12.25 |
| 56206/56205 | ಬೆಳಿಗ್ಗೆ 9.10 | ಬೆಳಿಗ್ಗೆ 9.45 ನಂಜನಗೂಡು ಮಾತ್ರ | ಬೆಳಿಗ್ಗೆ 10 | ಬೆಳಿಗ್ಗೆ 11.00 | | |
| 56220/16219 | ಬೆಳಿಗ್ಗೆ 10.30 | ಬೆಳಿಗ್ಗೆ 11.13 | ಮಧ್ಯಾಹ್ನ 12.30 | ಮಧ್ಯಾಹ್ನ 3:10 | ಮಧ್ಯಾಹ್ನ 3.40 | ಸಂಜೆ 4.55 |
| 56210/56209 | ಮಧ್ಯಾಹ್ನ 12.30 | ಮಧ್ಯಾಹ್ನ 1.10 | ಮಧ್ಯಾಹ್ನ 2.15 | ಸಂಜೆ 6 | ಸಂಜೆ 6.43 | ಸಂಜೆ 7.50 |
| 56208/56207 | ಮಧ್ಯಾಹ್ನ 2.50 | ಮಧ್ಯಾಹ್ನ 3.35 | ಸಂಜೆ 4.40 | ಸಂಜೆ 5 | ಸಂಜೆ 5.40 | ಸಂಜೆ 6.35 |
| 56282/56201 | ಸಂಜೆ 6.45 | ಸಂಜೆ 7.29 | ರಾತ್ರಿ 8.35 | ರಾತ್ರಿ 8.50 | ರಾತ್ರಿ 9.35 | ರಾತ್ರಿ 10.30 |

# ಹನುಮಂತನ ಆದರ್ಶ, ಅದರ ಫಲ

ವಾದಿರಾಜ ಪ್ರಸನ್ನ

ಶ್ರೀಮದ್ರಾಮಾಯಣದಲ್ಲಿ ನಡೆದ ಒಂದು ಪ್ರಸಂಗ ಹೀಗಿದೆ. ಲಂಕಾಧೀಶನಾದ ರಾವಣನು ಮಾರುವೇಷದಲ್ಲಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋಗಿ, ಅಶೋಕವನದಲ್ಲಿರಿಸಿ ಹತ್ತು ತಿಂಗಳುಗಳು ಕಳೆದಿತ್ತು. ಪ್ರಣಯ ಭಿಕ್ಷೆಯಾಚಿಸಿ, ಅದು ಕೈಗೂಡದೇ ರಾವಣನಿಗೆ ರೋಸಿಹೋಗಿತ್ತು. ಕುಪಿತನಾದ ರಾವಣನು ಇನ್ನು ಎರಡು ತಿಂಗಳುಗಳ ಕಾಲದ ವಾಯಿದೆಯನ್ನು ಕೊಟ್ಟು, ಒಪ್ಪದಿದ್ದರೆ ಅವಳನ್ನು ಕೊಂದು ತುಂಡು - ತುಂಡಾಗಿ ಕತ್ತರಿಸಿ ಹಸಿ ಮಾಂಸವನ್ನೇ ಬೆಳಗಿನ ಉಪಾಹಾರಕ್ಕೆ ಬಡಿಸಿ ಎಂದು ಕೋಪದಿಂದ ಸೇವಕರಿಗೆ ಆಜ್ಞಾಪಿಸಿದನು.

ಸೀತೆಯೂ ಸಹ ರಾವಣನಂತಹ ನೀಚನನ್ನು ನೋಡಲೂ ಇಚ್ಛಿಸದೇ ಒಣ ಹುಲ್ಲುಕಡ್ಡಿಯನ್ನು ಅಡ್ಡವಾಗಿಟ್ಟು ಹೀಗೆ ಹೇಳಿದಳು ‘ನನ್ನನ್ನು ತಿನ್ನಬಹುದು, ಆದರೆ ನನ್ನ ಪಾತಿವ್ರತ್ಯವನ್ನು ನೀನು ಕೆಡಿಸಲಾರೆ, ಅಲ್ಲದೇ ರಾಮನನ್ನೂ ನೀನು ಗೆಲ್ಲಲು ಸಾಧ್ಯವಿಲ್ಲದೇ ಅವನ ತೀಕ್ಷ್ಣವಾದ ಬಾಣಗಳಿಗೆ ಗುರಿಯಾಗಿ ಸರ್ವನಾಶವಾಗುತ್ತೀಯೆ!’’

ಈ ಘಟನೆಯಿಂದ ವಿವಶಳಾಗಿ ಸೀತೆಯು, ಪ್ರಾಣತ್ಯಾಗ ಮಾಡಿಕೊಳ್ಳಲು ನಿಶ್ಚಯಿಸಿದಳು. ತನ್ನ ನೀಳವಾದ ತಲೆ ಕೂದಲನ್ನು ಮರಕ್ಕೆ ಬಿಗಿದು ಆತ್ಮಹತ್ಯೆಗೆ ಅನುವಾದಳು. ಇತ್ತ ಶ್ರೀರಾಮನ ದೂತನಾದ ಹನುಮಂತನು ಸೀತೆಯನ್ನು ಅನ್ವೇಷಿಸುತ್ತಾ ಅಶೋಕ ವನಕ್ಕೆ ಬಂದನು. ಅವನು ಕಂಡ ಹೃದಯವಿದ್ರಾವಕವಾದ ಮೊದಲ ದೃಶ್ಯವೇ ಇದಾಗಿತ್ತು.

ಸಮಯಪ್ರಜ್ಞೆಯಿಂದ ಹನುಮಂತನು, ಇದನ್ನು ಶಾಂತವಾಗಿ ಪರಿಹರಿಸುವುದು ಹೇಗೆಂದು ಕ್ಷಣಕಾಲ ಚಿಂತಿಸಿ, ಸೀತೆಯ ಮನಸ್ಸನ್ನು ತತ್ಕಾಲದಲ್ಲಿ ಶಾಂತಗೊಳಿಸಿ ತನ್ನ ಕೆಲಸ ಸಫಲಗೊಳಿಸಲು ಅನುವಾಗುವಂತೆ, ಅವಳ ಮನಸ್ಸು ತನ್ನತ್ತ ಸುಮುಖವಾಗಲು ಶ್ರೀ ರಾಮನ ವಂಶಚರಿತೆಯನ್ನು ಸಂಕ್ಷಿಪ್ತವಾಗಿ, ಸುಶ್ರಾವ್ಯವಾಗಿ ಹಾಡಿದನು. ಹಾಗೆಯೇ ತಾನು ನೋಡುತ್ತಿರುವ ಸ್ತ್ರೀಯಲ್ಲಿ ಶ್ರೀರಾಮನು ತಿಳಿಸಿದ ಸೀತೆಯ ಆಕಾರ, ರೂಪ, ಮೈಬಣ್ಣ ಇತ್ಯಾದಿ ಲಕ್ಷಣಗಳು ಇರುವುದನ್ನು ನಾನು ಕಂಡೆ ಎಂದು ಉದ್ಗರಿಸಿದ.

ಸೀತೆಯು ಈ ಶಬ್ದಗಳು ಎಲ್ಲಿಂದ ಬರುತ್ತಿವೆಯೆಂದು ನೋಡುತ್ತಾ ಪ್ರಾಣತ್ಯಾಗದಿಂದ ವಿಮುಖಳಾಗಿ ಕೆಳಗೆ ಇಳಿಯುತ್ತಾಳೆ. ಹನುಮಂತನು ಸೀತೆಯ ಸಮೀಪಕ್ಕೆ ಬಂದು ಶ್ರೀರಾಮನ ರಾಜಮುದ್ರಾ ಉಂಗುರವನ್ನು ಕೊಟ್ಟು ತಾನು ಶ್ರೀರಾಮರ ಧೂತ ಹನುಮಂತ ಎಂದು ತಿಳಿಸುತ್ತಾನೆ. ಮುಂದಿನ ಸುಕಾಂತ್ಯದ ಕತೆ ತಿಳಿದೇ ಇದೆ.

ಈ ಘಟನೆ ನಡೆದು ಸಹಸ್ರಾರು ವರ್ಷಗಳೆ ಸಂದಿವೆ. ಆದರೂ ಇಂದಿಗೂ ನಮ್ಮ ಕಥೆಯೇ ಆಗಿದೆ. ರಾವಣನು, ತನ್ನಲ್ಲಿರುವುದನ್ನು ಬಿಟ್ಟು ಬೇಡದ, ಕೈಗೆ ಸಿಗದ ಕಾಮನೆಗಳಿಗೆ ಬಲಿಯಾಗಿ ಧರ್ಮವನ್ನು ಮೀರುತ್ತಾನೆ. ನಮ್ಮ ಇಂದಿನ ಸಮಾಜದಲ್ಲೂ ಇಂತಹ ಪ್ರವೃತ್ತಿಯನ್ನು ಕಾಣುತ್ತೇವೆ. ರಾಮನು ರಾವಣನಂತಹ ಅಧರ್ಮಿಯನ್ನು ವಧಿಸಿ ಧರ್ಮವನ್ನು ಕಾಪಾಡುತ್ತಾನೆ. ಇನ್ನು ಸೀತೆಯಾದರೋ ಒಂದು ಪ್ರಕ್ಷುಬ್ಧವಾದ ಸನ್ನಿವೇಶದಲ್ಲಿ ವಿಚಲಿತಳಾಗಿ ತಪ್ಪು ನಿರ್ಣಯಕ್ಕೆ ಬರುತ್ತಾಳೆ. ನಮ್ಮ ಜೀವನದಲ್ಲೂ ಇಂತಹ ಸನ್ನಿವೇಶಗಳು ಬರುವುದುಂಟು. ಆಗ ಸಮಯೋಚಿತವಾಗಿ ಹನುಮಂತನಿಂದ ಮಧುರವಾದ ರಾಮಚರಿತೆಯನ್ನು ಕೇಳಿ ಧೃತಿಯನ್ನು ಹೊಂದುತ್ತಾಳೆ. ರಾಮ ಸೇವೆಗಾಗಿ ತನ್ನ ಸರ್ವಸ್ವವನ್ನೂ ಸಮರ್ಪಿಸಿಕೊಂಡ ಆಂಜನೇಯನು ಸಮಯಪ್ರಜ್ಞೆಯಿಂದ ತತ್ ಕ್ಷಣ ಆಗುವ ಅನಾಹುತವನ್ನು ತಪ್ಪಿಸಿದ.

ರಾಮ ಕಾರ್ಯಕ್ಕಾಗಿ ತನ್ನ ಜೀವನವನ್ನೇ ಮುಡುಪಿಟ್ಟಿದ್ದ ಹನುಮಂತನು ತನ್ನೆಲ್ಲ ಸೇವಾಕಾರ್ಯಗಳಲ್ಲಿಯೂ ಶ್ರೀರಾಮನನ್ನೇ ಆಧಾರವಾಗಿರಿಸಿಕೊಂಡಿದ್ದ. ಶ್ರೀರಾಮನು ಭವಸಾಗರವನ್ನು ದಾಟಿಸುವ ಜಗದ್ಗುರುವಾದ್ದರಿಂದ ಅದನ್ನು ಪ್ರತಿಬಿಂಬಿಸುವಂತಹ ಬಾಹ್ಯ ಸಮುದ್ರವನ್ನು ದಾಟಿದ. ಅಲ್ಲಿ ಸೀತಾಮಾತೆಗೆ ಶ್ರೀರಾಮಸ್ಮರಣೆಯ ಮೂಲಕವೇ ಧೃತಿಯನ್ನೂ, ರಾಮನ ಆಗಮನದ ನಿರೀಕ್ಷೆಯನ್ನೂ, ವಿಶ್ವಾಸವನ್ನೂ ಹೃದಯದಲ್ಲಿ ತುಂಬಿದ. ಹಾಗೆಯೇ ತನ್ನ ಯುದ್ಧ, ಲಂಕಾದಹನ, ಸಂವಾದಗಳ ಮೂಲಕ ರಾವಣನ ಮನಸ್ಸಿನಲ್ಲಿ ಆತಂಕವನ್ನೂ, ಶ್ರೀರಾಮನ ಶೌರ್ಯಪರಾಕ್ರಮಗಳ ಅಗಾಧತೆಯನ್ನೂ, ಧರ್ಮದ ಮೇಲ್ಮೆಯನ್ನು ಎತ್ತಿ ಹಿಡಿದ.

ಹೀಗೆ ಶ್ರೀರಾಮನ ಹೃದಯವನ್ನು ಮೈತುಂಬಿಕೊಂಡಿದ್ದ ಆಂಜನೇಯನು ಅದಕ್ಕನುಗುಣವಾಗಿಯೇ ವರ್ತಿಸಿ ಶ್ರೀರಾಮನ ಚರಿತೆಯನ್ನೂ, ರಸವನ್ನೂ ಓದುಗರ ಹೃದಯದಲ್ಲಿಯೂ ಬಿತ್ತುತ್ತಾನೆ. ಅಂತಹ ಆಚಾರ್ಯನಾಗಿದ್ದು, ರಾಮಭಕ್ತಿಯ ಆದರ್ಶವನ್ನು ಲೋಕದಲ್ಲಿ ಬಿಂಬಿಸಿದ ಮುಖ್ಯಪ್ರಾಣನಿಗೆ ನಮೋನ್ನಮಃ.

# ಕತ್ತೆ ಹಾಲಿಗೂ ಬೇಡಿಕೆ

ಎಂ.ಆರ್.ಮಂಜುನಾಥ್

ನಗರದ ಶಾರದಾದೇವಿ ನಗರದಲ್ಲಿ ‘ಹಾಲು ಬೇಕಾ ಕತ್ತೆ ಹಾಲು’ ಎಂದು ಕೂಗಿಕೊಂಡು ವ್ಯಕ್ತಿಯೊಬ್ಬ ಕತ್ತೆಗಳ ಹಿಂದೆ ಹೋಗುತ್ತಿದ್ದ. ಬೀದಿಗಳಲ್ಲಿ ತರಕಾರಿ, ಹಣ್ಣು, ರಂಗೋಲಿ ಪುಡಿ ಮಾರುವುದನ್ನು ನೋಡಿದ್ದ ನನಗೆ ಆಶ್ಚರ್ಯದ ಜೊತೆಗೆ ಕುತೂಹಲವೂ ಆಯಿತು. ‘ಈಗಲೂ ಕತ್ತೆಹಾಲು ಮಾರುವವರು ಇದ್ದಾರಲ್ಲ’ ಎಂದು ಕ್ಷಣಕಾಲ ನಿಂತು ನೋಡಿದೆ.

ಆತನನ್ನು ನೋಡಿದ ಮೇಲೆ ಅಲ್ಲಿಂದ ಮುಂದೆ ಹೋಗುವುದಕ್ಕೆ ಮನಸ್ಸಾಗದೇ ಅಲ್ಲೇ ಬೈಕ್ ನಿಲ್ಲಿಸಿ ಮಾತಿಗೆ ಎಳೆದೆ. ಆದರೆ ಆತನಿಗೆ ಕನ್ನಡ ಪೂರ್ತಿಯಾಗಿ ಬರುತ್ತಿರಲಿಲ್ಲ, ತಮಿಳುನಲ್ಲಿ ಮಾತನಾಡುತ್ತಿದ್ದ.

‘ಅಯ್ಯೋ.. ನಿಮ್ಮ ಹಾಗೆ ಅದೆಷ್ಟು ಜನ ಮಾತನಾಡಿಸಿ ಫೋಟೊ ತೆಗೆದುಕೊಂಡು ಹೋದರು. ಯಾರು ನನ್ನ ಬಗ್ಗೆ ಪೇಪರ್‌ನಲ್ಲಿ ಹಾಕಲಿಲ್ಲ. 6 ಕುಟುಂಬಗಳ ಸದಸ್ಯರು ತಮಿಳುನಾಡಿನ ಸೇಲಂನಿಂದ ಬಂದಿದ್ದೇವೆ. ನಮ್ಮ ತಾತನ ಕಾಲದಿಂದ ಕತ್ತೆಗಳನ್ನು ಸಾಕಿದ್ದೇವೆ. ನಮ್ಮಲ್ಲಿ 20 ಕತ್ತೆಗಳಿವೆ. ನಾವೆಲ್ಲರೂ ಒಂದೊಂದು ಬೀದಿಗಳಿಗೆ ತೆರಳಿ ಹಾಲು ಮಾರಿ ಜೀವನ ಸಾಗಿಸುತ್ತಿದ್ದೇವೆ’ ಎಂದು ಸುರೇಶ್ ಕರ್ಪನ್ ತಿಳಿಸಿದರು.

‘ಕತ್ತೆಮರಿ ಕುಡಿದು ಬಿಟ್ಟ ಹಾಲನ್ನು ಕರೆದು ಮಾರುತ್ತೇವೆ, ಒಂದು ಒಳಲೆಗೆ ₹50 ತೆಗೆದುಕೊಳ್ಳುತ್ತೇವೆ. ಒಂದು ದಿನಕ್ಕೆ ₹200ರಿಂದ ₹500ವರೆಗೆ ಸಂಪಾದನೆ ಮಾಡುತ್ತೇನೆ. ಕತ್ತೆ ಹಾಲನ್ನು ಮಕ್ಕಳಿಗೆ ಕುಡಿಸಿದರೆ ನೆಗಡಿ, ಕೆಮ್ಮು, ಕಫ, ಕೀಲು ನೋವು... ಇನ್ನಿತರೆ ಸಮಸ್ಯೆಗಳು ದೂರವಾಗುತ್ತವೆ’ ಎಂದು ಅವರು ಹೇಳುತ್ತಾರೆ.

‘ಕತ್ತೆ ಹಾಲು ಆರೋಗ್ಯಕ್ಕೆ ಒಳ್ಳೆಯದು, ಆದರೆ ಹಾಲು ಕುಡಿಯುವುದರಿಂದ ರೋಗಗಳು ವಾಸಿಯಾಗುತ್ತವೆ ಎಂಬ ಬಗ್ಗೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ. ಎಲ್ಲವೂ ಅಂತೆಕಂತೆ’ ಎಂದು ನಿವೃತ್ತ ಪಶುವೈದ್ಯಾಧಿಕಾರಿ ನಂಜಪ್ಪ ತಿಳಿಸುತ್ತಾರೆ.

ರೋಗವಿಲ್ಲದ ಕತ್ತೆಗಳ ಹಾಲನ್ನು ಕುಡಿಸಬೇಕು, ರೋಗವಿದ್ದರೆ ಮನುಷ್ಯರಿಗೂ ತೊಂದರೆಯಾಗುತ್ತದೆ ಎಂದು ಅವರು ಎಚ್ಚರಿಸುತ್ತಾರೆ.

ಕತ್ತೆ ಹಾಲಿನಲ್ಲಿ ಒಮೆಗಾ 3 ಕೊಬ್ಬಿನ ಆಮ್ಲ, ಪ್ರೊಟೀನ್ ಸಹ ಒಳಗೊಂಡಿದೆ.



ಕತ್ತೆಗಳೊಂದಿಗೆ ಮಾಲೀಕ ಸುರೇಶ್

## ಚಿಣ್ಣರ ಚಿತ್ರ






ಮೈಸೂರು ತಾಲ್ಲೂಕಿನ ಹಂಚ್ಯಾದ ಶ್ರೀವಿದ್ಯಾಸರೋವರ ಸಂಸ್ಥೆಯ 8ನೇ ತರಗತಿ ವಿದ್ಯಾರ್ಥಿನಿ ಎಸ್.ಸಂಜನಾ ಬಿಡಿಸಿದ ಗೊಂಬೆ ಚಿತ್ರ



ಮೈಸೂರು ತಾಲ್ಲೂಕಿನ ಹಂಚ್ಯಾದ ಶ್ರೀವಿದ್ಯಾಸರೋವರ ಸಂಸ್ಥೆಯ 8ನೇ ತರಗತಿ ವಿದ್ಯಾರ್ಥಿನಿ ಎಸ್. ಹರ್ಷಿತಾ ಬಿಡಿಸಿದ ಚಿತ್ರ

